

## ನಕ್ಕುಬಿಡಿ

ಶಿಕ್ಷಕಿ: ಯಾಕೋ ರಂಗ ಲೇಟಾಗಿ ಬಂದೆ?
ರಂಗ: ಮನೇಲಿ ನಮ್ಮಪ್ಪ- ಅಮ್ಮ ಜಗಳವಾಡ್ತಾ ಇದ್ರು ಮೇಡಂ..
ಶಿಕ್ಷಕಿ: ನಿಮ್ಮಪ್ಪ-ಅಮ್ಮ ಜಗಳವಾಡ್ತಿದ್ರೆ ನೀನೇನ್ ಮಾಡ್ತಿದ್ದೋ ಅಲ್ಲಿ. ಬೇಗ ಬರಬಹುದಿತ್ತಲ್ಲಾ?
ರಂಗ: ಇಲ್ಲಾ ಮೇಡಂ, ನಂದೊಂದು ಶೂ ಅಪ್ಪನ ಕೈಲಿತ್ತು, ಮತ್ತೊಂದು ಅಮ್ಮನ ಕೈಲಿತ್ತು..!

★★★

ಗುಂಡ ಬ್ಯಾಂಕ್‌ನಲ್ಲಿ ಅಕೌಂಟ್ ಓಪನ್ ಮಾಡ್ಲೋಕೆ ಹೋದ. ಅಲ್ಲಿ ಬ್ಯಾಂಕ್‌ನವರು ಅರ್ಜಿ ಫಾರಂ ಕೊಟ್ಟು ಅದನ್ನು ತುಂಬಿಕೊಂಡು ಬರಲು ಹೇಳಿದರು. ಗುಂಡ ಮರುದಿನ ದೆಹಲಿ ವಿಮಾನವೇರಿ ದೆಹಲಿ ತಲುಪಿದ. ಕಾರಣವೇನು ಗೊತ್ತೆ?
ಅರ್ಜಿಯಲ್ಲಿ, 'ರೈಟ್ ಯುವರ್ ನೇಮ್ ಇನ್ ಕ್ಯಾಪಿಟಲ್' ಅಂತಾ ಬರೆದಿತ್ತು..!

★★★

ರಂಗ ಅಮೆರಿಕಾದಿಂದ ಹಿಂದಿರುಗಿದ ನಂತರ ಹೆಂಡತಿಯನ್ನು ಕೇಳಿದ, 'ನಾನು ವಿದೇಶದವನಂತೆ ಕಾಣುತ್ತಿದ್ದೇನಾ?'
ಹೆಂಡತಿ: ಇಲ್ಲಾ, ಏಕೆ?
ರಂಗ: ಮತ್ತೆ, ಅಮೆರಿಕಾದಲ್ಲಿ ಒಬ್ಬ ಹುಡುಗಿ ನನ್ನ ನೋಡಿ ನೀವು ವಿದೇಶದವ್ರಾ ಅಂತಾ ಕೇಳಿದ್ಲು..!

★★★

ರಾತ್ರಿ 2 ಗಂಟೆಗೆ ಒಮ್ಮೆಲೆ ಹೆಂಡತಿ ಗಂಡನನ್ನು ನಿದ್ದೆಯಿಂದ ಎಬ್ಬಿಸಿದಳು.
ಹೆಂಡತಿ: ತ್ರಿದೇವ್ ಸಿನಿಮಾದಲ್ಲಿದ್ದ ಹೀರೋಯಿನ್‌ಗಳ ಹೆಸರೇನು?
ಗಂಡ: ಮಾಧುರಿ ದೀಕ್ಷಿತ್, ಸಂಗೀತಾ ಬಿಜಲಾನಿ, ಸೋನಮ್
ಹೆಂಡತಿ: ಡಿಡಿಎಲ್‌ಜೆ ಸಿನಿಮಾದಲ್ಲಿ ಕಾಜೋಲ್ ಮಾಡಿದ ರೋಲ್ ಹೆಸರೇನು?



ಗಂಡ: ಸಿಮ್ರನ್
ಹೆಂಡತಿ: ಎರಡು ವರ್ಷದ ಹಿಂದೆ ಪಕ್ಕದ್ಮನೆ ಖಾಲಿ ಮಾಡ್ಕೊಂಡು ಮೈಸೂರಿಗೆ ಶಿಫ್ಟ್ ಆದ್ರಲ್ಲಾ, ಆ ಹೆಂಗಸಿನ ಹೆಸರೇನು?
ಗಂಡ: ಮೀನಾಕ್ಷಿ. ಹೌದು ಇದನ್ನೆಲ್ಲಾ ಈಗ್ಯಾಕೆ ಕೇಳ್ತಿದ್ದೀಯಾ?
ಹೆಂಡತಿ: ನಿನ್ನೆ ನನ್ನ ಬರ್ತ್‌ಡೇ ಇತ್ತು.

(ಸಂಗ್ರಹ) **ಪ.ನಾ.ಹಳ್ಳಿ.ಹರೀಶ್ ಕುಮಾರ್**



ಅತಿಥಿ: ನಾನು ಊಟ ಮಾಡುತ್ತಿರುವಾಗ ನಿಮ್ಮ ನಾಯಿ ತುಂಬ ಹೊತ್ತಿನಿಂದ ನನ್ನನ್ನೇ ದುರುಗುಟ್ಟಿಕೊಂಡು ನೋಡುತ್ತಿದೆಯಲ್ಲ ಏಕೆ?
ಯಜಮಾನ: ನೀವು ಬೇಗ ಊಟ ಮುಗಿಸಿ. ಬಹುಶಃ ಅದು ತನ್ನ ತಟ್ಟೆಯನ್ನು ಗುರುತಿಸಿದಂತೆ ತೋರುತ್ತದೆ.

★★★

ವ್ಯಾಕ್ಯೂಮ್ ಕ್ಲೀನರ್ ಮಾರುವ ಸೇಲ್ಸ್‌ಮನ್ ಒಂದು ಮನೆಯ ಕದ ತಟ್ಟಿದ. ಮನೆಯ ಯಜಮಾನಿ ಕದ ತೆಗೆಯುವುದೇ ತಡ, ಒಳಗೆ ನುಗ್ಗಿ ಲಿವಿಂಗ್ ರೂಮ್‌ನಲ್ಲಿ ಹಾಸಿದ ಕಾರ್ಪೆಟ್ ಮೇಲೆ ತಾನು ತಂದ ಒಂದಷ್ಟು ಸಗಣಿಯನ್ನು ಚೆಲ್ಲಿ, 'ಮೇಡಂ ಮೂರು ನಿಮಿಷದಲ್ಲಿ ಈ ಸಗಣಿ ನನ್ನ ವ್ಯಾಕ್ಯೂಮ್ ಕ್ಲೀನರ್‌ದಿಂದ ಸ್ವಚ್ಛಪಡಿಸದಿದ್ದರೆ ಅದನ್ನು ನಾನು ತಿಂದು ಬಿಡುತ್ತೇನೆ. ಇದು ನನ್ನ ಚಾಲೆಂಜ್' ಎಂದು ಹೇಳಿದ.
ಅದಕ್ಕೆ ಆ ಮಹಿಳೆ ನಗುತ್ತ 'ಹಾಗಾದರೆ ನಂಜಿಕೊಳ್ಳಲು ಸ್ವಲ್ಪ ಉಪ್ಪಿನಕಾಯಿ ಕೊಡಲೇ? ಏಕೆಂದರೆ ನಮ್ಮ ಮನೆಯಲ್ಲಿ ಇಂದು ಕರೆಂಟ್ ಇಲ್ಲ' ಎಂದಳು.

★★★

ಕ್ಲಾಸ್‌ರೂಂ ಎಂದರೆ ಒಂದು ಟ್ರೇನ್ ಇದ್ದಂತೆ. ಮುಂದಿನ ಕೆಲವು ಬೆಂಚುಗಳು ಬುದ್ಧಿವಂತರಾದ ವಿದ್ಯಾರ್ಥಿಗಳಿಗೆ ಮೀಸಲಾಗಿರುತ್ತವೆ. ಒಂದು ವಿಧದಲ್ಲಿ ಅವರು ಕ್ಲಾಸಿನ ವಿಐಪಿಗಳು.
ಮಧ್ಯದ ಬೆಂಚುಗಳು ಜನರಲ್ ಬೋಗಿಗಳು ಸಾಮಾನ್ಯ ಬುದ್ಧಿವಂತಿಕೆ ಹೊಂದಿದವರಿಗೆ ಮೀಸಲು. ಕೊನೆಯ ಬೆಂಚುಗಳು ಸ್ಲೀಪರ್ ಕೋಚುಗಳು.

★★★

ಟ್ರಾಫಿಕ್ ಪೋಲಿಸ್‌ನವರ ಒಂದು ಜಾಹಿರಾತು: ರಕ್ತದಾನ ಮಾಡಿ ಆದರೆ ರಸ್ತೆಯ ಮೇಲಲ್ಲ.
ಅರಣ್ಯ ಇಲಾಖೆಯವರ ಜಾಹೀರಾತು: ಪಕ್ಷಿಗಳನ್ನು ಕ್ಯಾಮರಾದಿಂದ ಶೂಟ್ ಮಾಡಿ, ಗನ್ನಿನಿಂದಲ್ಲ.
ಪೆಟ್ರೋಲ್ ಬಂಕಿನವರ ಜಾಹಿರಾತು: ದಯವಿಟ್ಟು ಧೂಮಪಾನ ಮಾಡಬೇಡಿ, ನಿಮ್ಮ ಪ್ರಾಣ ತುಂಬ ಅಮೂಲ್ಯವಾಗಿರಬಹುದು. ಆದರೆ ನಮ್ಮ ಪೆಟ್ರೋಲ್ ಅದಕ್ಕಿಂತಲೂ ಅಮೂಲ್ಯ.

(ಸಂಗ್ರಹ) **ಮುರಲೀಧರ ಕುಲಕರ್ಣಿ, ಬೀದರ್**